ಇ) ಮೇಲ್ಕಂಡ ಸಂಸ್ಥೆಯು ಸರಿಯಾದ ಲೆಕ್ಕವಿಡದೆ, ಬಿಲ್ಲನ್ನು ನೀಡದೆ, ಎರಡು ಬಗೆಯ ಲೆಕ್ಕದ ಪುಸ್ತಕವಿಟ್ಟು ಲಕ್ಷಾಂತರ ರೂ.ಗಳ ತೆರಿಗೆಯನ್ನು ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಹಾಗಿದ್ದಲ್ಲಿ, ಸರ್ಕಾರವು ಈ ಸಂಸ್ಥೆಯ ಪುಸ್ತಕಗಳನ್ನು ಸರಿಯಾಗಿ ಪರಿಶೋಧಿಸಿ ಮೇಲ್ಕಂಡ ವರ್ಷಗಳಿಗೆ ಸರ್ಕಾರಕ್ಕೆ ಬರಬೇಕಾದ ಮಾರಾಟ ತೆರಿಗೆ ಬಾಕಿಯನ್ನು ವಸೂಲಿ ಮಾಡುವುದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಮಾರಾಟ ತೆರಿಗೆ ಪಾವತಿಯ ವಿವರಗಳು ಈ ಕೆಳಕಂಡಂತಿವೆ

ಬಿ.ವಿ ರಾಮಚಂದ್ರಪ್ಪ ಅಂಡ್ ಸನ್ಸ್, ಬೆಂಗಳೂರು.		ಬಿ.ವಿ. ರಾಮಚಂದ್ರಪ್ಪ ಅಂಡ್ ಕಂಪನಿ, ಬೆಂಗಳೂರು.
87-88	ರೂ.1,24,726.77	ರೂ.1,84,219.20
88-89	ರೂ. 20,265.24	ರೂ.1,98,971.85
89-90	ರೂ. 19,803.00	ರೂ. 1,42,799.39
90-91 (ಎಪ್ರಿಲ್ 90ರಿಂದ ಜನವರಿ 91ರತನಕ)	ರೂ.8,481.50	ರೂ.64,512.40

ಆ) ಇಲ್ಲ.

ಇ) ಇಲ್ಲ.

ಈ) ಅ) ಮತ್ತು ಇ) ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರದಿಂದ ಈ ಪ್ರ ಉದ್ಭವಿಸುವುದಿಲ್ಲ.

ಸಿದ್ದಯ್ಯನ ಕೋಟೆ ಮತ್ತು ಬಳ್ಳಾರಿ ಜಿಲ್ಲೆ ಕೊಡ್ಲಿಗಿ ತಾಲ್ಲೂಕಿನ ಕೊಂಭ ಹಳ್ಳಿ ಮದ್ಯೆ ಸೇತುವೆ ನಿರ್ಮಾಣ ಕಾರ್ಯ

31 - ಶ್ರೀ ಕೆ.ವಿ. ರವೀಂದ್ರ ಬಾಬು (ಕೊಟ್ಟೂರು) : ಮಾನ್ಯ ಮುಖ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕಿನ ಸಿದ್ದಯ್ಯನ ಕೋಟೆ ಮತ ಬಳ್ಳಾರಿ ಜಿಲ್ಲೆ ಕೊಡ್ಲಿಗಿ ತಾಲ್ಲೂಕಿನ ಕೊಂಭಿಹಳ್ಳಿ ಮಧ್ಯೆ ಸೇತು ನಿರ್ಮಾಣಕ್ಕಾಗಿ ಯಾವಾಗ ತಳಪಾಯವನ್ನು ಹಾಕಲಾಯಿತು.

ಆ) ಸೇತುವೆ ನಿರ್ಮಾಣದ ಕಾಮಗಾರಿಯ ಹಂತ.

ಇ) ಆ ಸೇತುವೆಗೆ ಇಲ್ಲಿಯವರೆಗೆ ಮಾಡಲಾಗಿರುವ ವೆಚ್ಚದ ಮೊತ್ತ.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಸಿದ್ದಯ್ಯನ ಕೋಟೆ ಮತ್ತು ಕೊಂಭಿಹಳ್ಳಿ ಮಧ್ಯೆ ಸೇತುವೆಗಾಗಿ ತಳಪಾಯವ (ಅಂದರೆ ಸಿದ್ದಯ್ಯನ ಕೋಟೆ ಹತ್ತಿರದ ಸೇತುವೆಗೆ) ಇನ್ನೂ ಹಾಕಿರುವುದಿಲ್ಲ.

ಆ) ಮೇಲೆ ತಿಳಿಸಿರುವ ಸೇತುವೆ ಕಾಮಗಾರಿಯ ನಿರ್ಮಾಣವನ್ನು ಇನ ಪ್ರಾರಂಭಿಸಿರುವುದಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮದ ಸ್ಥಾಪನೆ

460 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಸಣ್ಣ ಪ್ರಮಾಣ ಕೈಗಾರಿಕಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರ